ನೋಟು–ಚಿಲ್ಲರೆಗಳನ್ನೆಲ್ಲ ಎಣಿಸಿ ಮುಗಿಸಿದಾಗ
ತಲೆಮಿದುಳಿನ ಬೆಳವಣಿಗೆಯು ಸ್ಯಾನಿಂಗಿಗೆ
ಅದು ಎಟುಕುವಂತಾಗಲೀ ಎಂಬ ಪ್ರತೀಕ್ಷೆ
ಮಾತ್ರ.
ಯಾಕಾಗಿ ಈ ಬದುಕೆಂಬ ಪ್ರಶ್ನೆಗೆ
ಉತ್ತರ ಕಂಡುಕೊಳ್ಳಲಾಗದೆ
ಮೇಣದ ಬತ್ತಿಯನ್ನು ಊದಿ ನಂದಿಸಿ
ಹರಕು ಚಾಪೆಯ ಮೇಲೆ ಮುದುರಿಕೊಳ್ಳುವಾಗ
ಭದ್ರತೆಯಿಲ್ಲದ ಬಾಗಿಲನ್ನು ಯಾರಿಗೂ
ತಟ್ಟಲು ತೋಚದಿರಲೀ ಎಂಬ ಯೋಚನೆ
ಮಾತ್ರ.

ನಗರದಿಂದ ಹೊರಟಿರುವ
ಕೊನೆಯ ಬಸ್ಸಿನಲ್ಲೊಬ್ಬಳೇ
ಮುಂದಿನ ಸೀಟಿನಲ್ಲಿ ಕುಳಿತಿರುವವಳು
ಹೆದರಿ ಹೆದರಿ ಹೆದರಿಕೆಯೇ ಇಲ್ಲವಾದವಳು
ಅತ್ತು ಅತ್ತು ಅಳುವುದಕ್ಕೆ ಸಾಧ್ಯವಾಗದವಳು
ಸಹಿಸಿ ಸಹಿಸಿ ಸಹನೆಯಾದವಳು
ದಹಿಸಿ ದಹಿಸಿ ದಹನವಾದವಳು
ಅವಳು ತುಳಸಿನೋ ಎಲ್ಸಿನೋ ಐಷಳೋ

---

# ರಕ್ಷಕ

ಇಡೀ ಸಂತೋಷ ಭರವಸೆಗಳೆಲ್ಲವು
ಸೋರಿಹೋದವು ಎಂದು ಅನಿಸುವಾಗ;
ಅದ್ಭುತಗಳು ಇಡಿಯಾಗಿ ಅಪ್ರತ್ಯಕ್ಷವಾದವು
ಎಂದು ತಿಳಿಯುವಾಗ;
ಆತ್ಮವನ್ನು ಕೂಡ ಅನುಮಾನಿಸತೊಡಗುವಾಗ;
ಪ್ರೇಮ ಶೂನ್ಯತೆಯಲ್ಲಿ ಪ್ರದಕ್ಷಿಣೆ ಹಾಕುವಾಗ;
ಜೀವವಿರುವಂಥ ಯಾವುದನ್ನೂ ನಂಬತಕ್ಕದ್ದಲ್ಲ
ಎಂದಾಗಿಬಿಡುವಾಗ;
ಪ್ರಶ್ನೆಗಳು ಉತ್ತರಗಳಿಲ್ಲದೆ ಸುತ್ತಲೂ
ಸುಡುಗಾಡು ನೃತ್ಯ ನರ್ತಿಸುವಾಗ;
ಅತ್ಯಂತ ಅಗತ್ಯದ ಸಮಯದಲ್ಲಿ
ಕೆಲವೊಂದು ಪುಸ್ತಕಗಳು ನಿಮ್ಮನ್ನು
ಹುಡುಕಿಕೊಂಡು ಬರುತ್ತವೆ.
ಬಹುಶಃ ಅವು ಬಹಳಷ್ಟು ವರ್ಷಗಳಿಂದ ನಿಮ್ಮ
ಅಲಮಾರುಗಳಲ್ಲಿಯೇ ಇದ್ದಿದ್ದಿರಬಹುದು.
ತಲೆಮಾರುಗಳಿಗಿಂತಲೂ ಮೊದಲು–
ಯಾರದ್ದೋ ಪ್ರಿಯವಾದುದ್ದಿರಬಹುದು
ಅಳಿಸಿಹೋಗಲಿರುವ ಒಂದು ಹೆಸರು
ಬರೆಯಲ್ಪಟ್ಟಿದ್ದಿರಬಹುದು.
ಅಥವಾ, ನಿತ್ಯ ಹೋಗುತ್ತಿದ್ದ ಪುಸ್ತಕದ ಅಂಗಡಿಯಲ್ಲಿ
ದಿನವೂ ಇರುತ್ತಿದ್ದ ಸ್ಥಾನದಲ್ಲೇ ಇದ್ದು
ನಿಮ್ಮನ್ನು ನಿಸ್ಸಂಗವಾಗಿ ನೋಡುತ್ತಿದ್ದಂಥವಿರಬಹುದು.
ಆದರೆ, ಅಂತಹ ಪುಸ್ತಕಗಳಲ್ಲಿ
ವಿಧಿಯು ರುಜು ಮಾಡಿರುವುದನ್ನು
ಪುಟ ತೆರೆಯುವಾಗ ಗುರುತಿಸಬಹುದು.

ಅಪರಿಚಿತವಾಗಿದ್ದರೂ ಅತಿಪರಿಚಿತವೆನಿಸುವಂಥ
ಶಬ್ದದಲ್ಲಿ ಅವು ನಿಮ್ಮೊಡನೆ ಮಾತನಾಡುತ್ತವೆ
ಇಂದ್ರಿಯಾತೀತವಾದ ಸ್ಪರ್ಶವಾಗಿ
ಕೂದಲೆಳೆಗಳನ್ನು ಬಾಚುತ್ತವೆ
ನೊಸಲ ಮೇಲೆ ಮುತ್ತನಿಕ್ಕುತ್ತವೆ
ಎದೆಗಪ್ಪಿಕೊಂಡು ಸಾಂತ್ವನಪಡಿಸುತ್ತವೆ
ಲೋಕದ ಏಕೈಕ ಏಕಾಕಿ ನೀವಲ್ಲವೆಂದು
ಹಲವು ಬಾರಿ ಮಂತ್ರಿಸುತ್ತವೆ.
ನೀವು ಹೇಳಬೇಕಾಗಿರುವಂಥವು
ಹಾಗೂ ಹೇಳಲಾಗದಂಥವು
ಅವುಗಳಲ್ಲಿ ಅಡಕವಾಗಿರುವುದನ್ನು ಕಂಡು
ಅದ್ಭುತಗೊಳ್ಳುವಿರಿ
ನಿಮ್ಮನ್ನು ನೀವು ನೀವಾಗಿಯೇ ಅವುಗಳಲ್ಲಿ
ಕಂಡುಕೊಳ್ಳುವಿರಿ

ನಿಮಗೆ ಬೇಕಾದ ಪುಸ್ತಕವನ್ನು
ನೀವೇ ಕಂಡುಕೊಳ್ಳಬೇಕಿರುವುದನ್ನು;
ಪುಸ್ತಕ ನಿಮ್ಮನ್ನು ಕಂಡುಕೊಳ್ಳಬೇಕಿರುವುದನ್ನು
ಕಾಲದ ಮಾರ್ಗದಲ್ಲಿ
ದಾಖಲಿಸಲಾಗಿದೆ ಎಂದೋ.

●